# Distinguish between Social Science and Social Studies

ಸಮಾಜ ವಿಜ್ಞಾನ ಮತ್ತು ಸಮಾಜ ಅಧ್ಯಯನಗಳ ನಡುವಿನ ವ್ಯತ್ಯಾಸ

- Distinction in nature, Social Sciences provide detailed knowledge about their respective fields, written of adults while social studies are primarily designed for instructional purposes in schools.

ಸ್ವರೂಪಕ್ಕೆ ಸಂಬಂಧಿಸಿದಂತೆ ಸಮಾಜ ವಿಜ್ಞಾನ ತನ್ನ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ವಯಸ್ಕರಿಗಾಗಿ ವಿವರವಾದ ಜ್ಞಾನವನ್ನು ಒದಗಿಸುತ್ತದೆ. ಸಮಾಜ ಅಧ್ಯಯನ ಪ್ರಾಥಮಿಕ ಹಂತದವರಿಗಾಗಿಯೇ ಸೂಚನೆಗಾಗಿ ರಚಿಸಲಾಗಿರುತ್ತದೆ.

- Social Sciences maintain a certain standard of knowledge not easily understood by school children. Social Studies are the amplified and recognized form of Social Sciences. It is simple, easy, appealing, interesting and learnable.

  ಸಮಾಜ ವಿಜ್ಞಾನ ಉನ್ನತ ಹಂತದ ಜ್ಞಾನವನ್ನು ಒಳಗೊಂಡಿದ್ದು ಪ್ರಾಥಮಿಕ ಹಂತದ ವಿದ್ಯಾರ್ಥಿಗಳು ಸರಿಯಾಗಿ ಅರ್ಥೈಸಿಕೊಳ್ಳಲಾರರು ಆದರೆ ಸಾಮಾಜಿಕ ಅಧ್ಯಯನ ಸಾಮಾಜಿಕ ವಿಜ್ಞಾನದ ಸರಳೀಕೃತ ಮಾದರಿಯಲ್ಲಿರುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ತಲುಪಬಹುದಾದ ಆಸಕ್ತಿಯುತ ಮತ್ತು ಕಲಿಯಬಹುದಾದಂತಹುದಾಗಿರುತ್ತದೆ.

- Distinction in viewpoint Social Sciences deal with theoretical aspect of human affairs, while Social Studies deal with the practical aspects.

  ಸಮಾಜ ವಿಜ್ಞಾನ ವಿಷಯದ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಮಾನವನ ಚಟುವಟಿಕೆಗಳಿಗೆ ಸಂಬಂಧಿಸಿದ ಸೈದ್ಧಾಂತಿಕ ತಳಹದಿ ಹೊಂದಿದ್ದರೆ, ಸಾಮಾಜಿಕ ಅಧ್ಯಯನ ಪ್ರಾಯೋಗಿಕ ಅಂಶಗಳಿಗೆ ಸಂಬಂಧಿಸಿದೆ.

- Distinction in aim, the aim of Social Science is theoretical study while that os Social Studies practically utility.

ಗುರಿಗೆ ಸಂಬಂದಿಸಿದಂತೆ ಸಮಾಜ ವಿಜ್ಞಾನ ಸೈದ್ಧಾಂತಿಕ ಅಧ್ಯಯನವಾದರೆ, ಸಾಮಾಜಿಕ ಅಧ್ಯಯನವು ಪ್ರಾಯೋಗಿಕ ಉಪಯುಕ್ತಾರ್ಹತೆ ಹೊಂದಿದೆ.

- The aim of Social Sciences is to provide knowledge whereas that of Social Studies is to develop individuals into good citizens.

ಸಮಾಜ ವಿಜ್ಞಾನದ ಗುರಿ ಜ್ಞಾನವನ್ನು ಒದಗಿಸುವುದಾದರೆ ಸಮಾಜ ಅಧ್ಯಯನದ ಗುರಿ ವ್ಯಕ್ತಿಗಳನ್ನು ಒಬ್ಬ ಒಳ್ಳೆಯ ನಾಗರೀಕರನ್ನಾಗಿ ಬೆಳೆಸುವುದಾಗಿದೆ.

- Distinction in integration Social Sciences provide knowledge in isolated form whereas Social Studies provide integrated knowledge.

ಸಮಾಜ ವಿಜ್ಞಾನ ಸ್ವತಂತ್ರ ಮತ್ತು ವ್ಯತಿರಿಕ್ತ ಜ್ಞಾನ ನೀಡಿದರೆ, ಸಾಮಾಜಿಕ ಅಧ್ಯಯನ ಕ್ರೊಢೀಕೃತ/ಸಮನ್ವಿತ ಜ್ಞಾನ ನೀಡುತ್ತದೆ.

- Social Sciences study society after analyzing it into various aspects. Social Studies provide an integrated knowledge of society by drawing practical and functional knowledge out of social sciences and unifying it into one subject.

ಸಮಾಜ ವಿಜ್ಞಾನವು ಸಮಾಜವನ್ನು ವಿವಿಧ ರೀತಿಯಲ್ಲಿ ವಿಶ್ಲೇಷಣೆ ಮಾಡಿ ಅದರ ಬಗ್ಗೆ ಅಧ್ಯಯನ ಮಾಡುವುದು. ಆದರೆ ಸಮಾಜ ಅಧ್ಯಯನ ಸಮಾಜ ವಿಜ್ಞಾನದಿಂದ ಸಮಾಜದ ಪ್ರಾಯೋಗಿಕ ಮತ್ತು ಕಾರ್ಯಾತ್ಮಕ ಜ್ಞಾನವನ್ನು ಒಂದೇ ವಿಷಯದಡಿ ಪಡೆದು ಅಭ್ಯಸಿಸುತ್ತದೆ.

- Distinction in readers, Social Sciences may be studied by a chosen few while Social Studies are a must for everybody.

  ಸಮಾಜ ವಿಜ್ಞಾನವನ್ನು ಕಡಿಮೆ ಸಂಖ್ಯೆಯಲ್ಲಿ ಅಭ್ಯಸಿಸಬಹುದು ಆದರೆ ಸಮಾಜ ಅಧ್ಯಯನವನ್ನು ಎಲ್ಲರೂ ಅಭ್ಯಸಿಸಬಹುದು.

- Social Sciences deal with advanced knowledge, required for those only who pursue university education. Social Studies enable the people to become good citizens.

  ಸಮಾಜ ವಿಜ್ಞಾನ ವಿಶ್ವವಿದ್ಯಾನಿಲಯ ಮಟ್ಟದ ಶಿಕ್ಷಣ ಪಡೆಯುವವರಿಗೆ ಅತ್ಯಂತ ಉಪಯೋಗಾರ್ಹ. ಸಮಾಜ ಅಧ್ಯಯನ ಉತ್ತಮ ನಾಗರೀಕರಾಗಲು ಎಲ್ಲರಿಗೂ ಉಪಯೋಗ.

- Social Science is a complex study whereas Social Studies comparatively simple and easy.

ಸಮಾಜ ವಿಜ್ಞಾನ ಅಧ್ಯಯನ ಸಂಕೀರ್ಣವಾದುದು ಆದರೆ ಸಮಾಜ ಅಧ್ಯಯನ ಸರಳ ಮತ್ತು ಸುಲಭವಾದುದು.